## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 390(476) |
| ಸದಸ್ಯರ ಹೆಸರು | : ಶ್ರೀ ಮಧು ಜಿ ಮಾದೇಗೌಡ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : 19.02.2024 |
| ಉತ್ತರಿಸುವ ಸಚಿವರು | : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖಾ ಸಚಿವರು. |

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ರಾಜ್ಯದ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಖಾಲಿಯಿರುವ ಪ್ರಾಥಮಿಕ ಸಹಶಿಕ್ಷಕರ ಪದವೀಧರ ಪ್ರಾಥಮಿಕ ಸಹಶಿಕ್ಷಕರ ಮತ್ತು ಪ್ರೌಢಶಾಲಾ ಸಹಶಿಕ್ಷಕರ ಹುದ್ದೆಗಳ ಸಂಖ್ಯೆ ಎಷ್ಟು; ನೇಮಕ ಮಾಡಿಕೊಳ್ಳಲಾದ ಅತಿಥಿ ಸಹ ಶಿಕ್ಷಕರ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)</td><td>ರಾಜ್ಯದ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಖಾಲಿಯಿರುವ ಹುದ್ದೆಗಳ ಮಾಹಿತಿ
<table>
<tr><th>ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರು</th><th>ಪದವೀಧರ ಪ್ರಾಥಮಿಕ ಸಹಶಿಕ್ಷಕರು</th><th>ಪ್ರೌಢ ಶಾಲೆಗಳಲ್ಲಿ ಸಹಶಿಕ್ಷಕರು</th></tr>
<tr><td>17,820</td><td>15,592</td><td>10,252</td></tr>
</table>
ಅತಿಥಿ ಶಿಕ್ಷಕರ ನೇಮಕ
<table>
<tr><th>ಪ್ರಾಥಮಿಕ ಶಾಲೆಗಳಲ್ಲಿ ಅತಿಥಿ ಶಿಕ್ಷಕರ ನೇಮಕ</th><th>ಪ್ರೌಢ ಶಾಲೆಗಳಲ್ಲಿ ಅತಿಥಿ ಶಿಕ್ಷಕರ ನೇಮಕ</th></tr>
<tr><td>34174</td><td>7808</td></tr>
</table>
ಜಿಲ್ಲಾವಾರು ಮಾಹಿತಿ ಅನುಬಂಧದಲ್ಲಿ ಒದಗಿಸಲಾಗಿದೆ</td></tr>
<tr><td>ಆ</td><td>ಅತಿಥಿ ಸಹಶಿಕ್ಷಕರಿಗೆ ತರಬೇತಿ ಮಾಹೆಯಾನ ಪಾವತಿಸುತ್ತಿರುವ ಗೌರವಧನ ಎಷ್ಟು; (ವಿವರ ನೀಡುವುದು)</td><td>ಪ್ರಸ್ತುತ ಸರ್ಕಾರಿ ಪ್ರಾಥಮಿಕ ಶಾಲಾ ಅತಿಥಿ ಶಿಕ್ಷಕರಿಗೆ ರೂ.10,000/- ಹಾಗೂ ಸರ್ಕಾರಿ ಪ್ರೌಢಶಾಲಾ ಅತಿಥಿ ಶಿಕ್ಷಕರಿಗೆ ರೂ.10,500/- ಗೌರವ ಸಂಭಾವನೆ ಪಾವತಿಸಲಾಗುತ್ತಿದೆ.</td></tr>
<tr><td>ಇ</td><td>ಪದವಿ ಜೊತೆಗೆ ಶಿಕ್ಷಕರ ತರಬೇತಿ ಪೂರೈಸಿರುವ ಸೇವಾ ಅನುಭವ ಹೊಂದಿರುವ ಹಾಗೂ ಶಾಲೆಯಲ್ಲಿ ಪೂರ್ಣಾವಧಿ ಕೆಲಸ ನಿರ್ವಹಿಸುತ್ತಿರುವ ಅತಿಥಿ ಸಹಶಿಕ್ಷಕರಿಗೆ ಮಾಸಿಕ ಪಾವತಿಸುತ್ತಿರುವ ಗೌರವ ಸಂಭಾವನೆ ತುಂಬ ಕಡಿಮೆಯಿದ್ದು, ಜೀವನ ನಿರ್ವಹಣೆ ಕಷ್ಟಸಾಧ್ಯವಾಗುತ್ತಿರುವುದರಿಂದ ಅತಿಥಿ ಸಹ ಶಿಕ್ಷಕರಿಗೆ ಗೌರವ ಸಂಭಾವನೆಯನ್ನು ಹೆಚ್ಚಿಸಲು ಸರ್ಕಾರ ಕ್ರಮಕೈಗೊಳ್ಳುವುದೇ</td><td>ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳಲಾಗಿರುವ ಅತಿಥಿ ಶಿಕ್ಷಕರುಗಳ ಗೌರವ ಸಂಭಾವನೆಯನ್ನು ಸೂಕ್ತವಾಗಿ ಪರಿಷ್ಕರಿಸಲು ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆ.</td></tr>
<tr><td>ಈ</td><td>ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುವ ಅತಿಥಿ ಶಿಕ್ಷಕರಿಗೆ ಸೇವಾ ಪ್ರಮಾಣ ಪತ್ರ ನೀಡುವುದು ಹಾಗೂ ಸೇವಾ ಹಿರಿತನದ ಆಧಾರದ ಮೇಲೆ ಗೌರವಧನ ಪಾವತಿಸಲು ಸರ್ಕಾರ ಕ್ರಮಕೈಗೊಳ್ಳುವುದೇ; (ಮಾಹಿತಿ ನೀಡುವುದು)</td><td>ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಖಾಲಿಯಿರುವ ಹುದ್ದೆಗಳಿಗೆ ತಾತ್ಕಾಲಿಕವಾಗಿ ಅತಿಥಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲಾಗಿದೆ. ಸದರಿ ಅತಿಥಿ ಶಿಕ್ಷಕರನ್ನು ಶೈಕ್ಷಣಿಕ ವರ್ಷದ ಅಂತ್ಯದವರೆಗೆ ಅಥವಾ ಖಾಯಂ ಶಿಕ್ಷಕರು ಖಾಲಿ ಹುದ್ದೆಯ ಕರ್ತವ್ಯಕ್ಕೆ ಹಾಜರಾದಲ್ಲಿ ಅತಿಥಿ ಶಿಕ್ಷಕರನ್ನು ಶಾಲಾ ಕರ್ತವ್ಯದಿಂದ ಬಿಡುಗಡೆ ಮಾಡಲಾಗುವುದು. ಪ್ರಯುಕ್ತ ಅತಿಥಿ ಶಿಕ್ಷಕರಿಗೆ ಸೇವಾ ಪ್ರಮಾಣ ಪತ್ರ ಹಾಗೂ ಸೇವಾ ಹಿರಿತನ ನೀಡಲಾಗುವುದಿಲ್ಲ.</td></tr>
</table>

| | | |
|---|---|---|
| ಉ | ಸರ್ಕಾರ, ರಾಜ್ಯದ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಖಾಲಿಯಿರುವ ಹುದ್ದೆಗಳ ಭರ್ತಿಗೆ ತೆಗೆದುಕೊಂಡಿರುವ ಕ್ರಮಗಳೇನು; ಎಷ್ಟು ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಆರ್ಥಿಕ ಇಲಾಖೆಯ ಸಹಮತಿ ಕೋರಲಾಗಿದೆ? (ವಿವರ ನೀಡುವುದು) | **<u>ಪ್ರಾಥಮಿಕ ಶಾಲಾ ವಿಭಾಗ :</u>**<br>2022-23 ನೇ ಸಾಲಿನಲ್ಲಿ ಒಟ್ಟು : 15,000 ಪದವೀದರ ಪ್ರಾಥಮಿಕ ಶಾಲಾ ಶಿಕ್ಷಕರು (6-8 ನೇ ತರಗತಿ) ನೇಮಕಾತಿಗಾಗಿ ದಿನಾಂಕ : 23-03-2022 ರಂದು ಅಧಿಸೂಚಿಸಲಾಗಿತ್ತು, ಈ ಹುದ್ದೆಗಳಿಗೆ ಎದುರಾಗಿ ಒಟ್ಟು 13,352 ಅಭ್ಯರ್ಥಿಗಳು ನೇಮಕಾತಿಗೆ ಅರ್ಹತೆ ಪಡೆದಿರುತ್ತಾರೆ. ಒಟ್ಟು : 12,429 ಅಭ್ಯರ್ಥಿಗಳಿಗೆ ಈಗಾಗಲೇ ಕೌನ್ಸಿಲಿಂಗ್ ಮೂಲಕ ಸ್ಥಳನಿಯುಕ್ತಿಗೊಳಿಸಲಾಗಿದೆ. ಪ್ರಸ್ತುತ ಖಾಲಿ ಇರುವ ಹಾಗೂ ವಯೋನಿವೃತ್ತಿಯಿಂದ ತೆರವಾಗುವ ಹುದ್ದೆಗಳನ್ನು ಅತಿಥಿ ಶಿಕ್ಷಕರ ನೇಮಕಾತಿ ಮೂಲಕ ಸರಿದೂಗಿಸಲಾಗುತ್ತಿದೆ.<br>**<u>ಸರ್ಕಾರಿ ಪ್ರೌಢಶಾಲೆಗಳಿಗೆ ಸಂಬಂಧಿಸಿದಂತೆ:</u>**<br>1. ಸರ್ಕಾರದ ಆದೇಶ ಸಂಖ್ಯೆ" ಇಪಿ 14 ಎಲ್‌ಬಿಪಿ 2022 ದಿನಾಂಕ: 13.09.2022 ರ ಪತ್ರದಲ್ಲಿ ರಾಯಚೂರು ಜಿಲ್ಲೆಯು ಸೇರಿದಂತೆ ರಾಜ್ಯದ ಸರ್ಕಾರಿ ಪ್ರೌಢಶಾಲೆಗಳಲ್ಲಿ ಖಾಲಿಯಿರುವ ವಿವಿಧ ವೃಂದದ ದೈಹಿಕ ಶಿಕ್ಷಣ ಶಿಕ್ಷಕರ 200 ಹುದ್ದೆಗಳು ಹಾಗೂ ವಿಶೇಷ ಶಿಕ್ಷಕರು 100 ಹುದ್ದೆಗಳು ಸೇರಿ ಒಟ್ಟು 2500 ಶಿಕ್ಷಕರುಗಳ ಹುದ್ದೆಗಳನ್ನು ಅನುಮತಿ ನೀಡಿರುವ 15000 ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿಯಲ್ಲಿ ಭರ್ತಿಯಾಗದೇ ಖಾಲಿ ಉಳಿದ ಹುದ್ದೆಗಳಿಗೆ ಹೊಂದಾಣಿಕೆ ಮಾಡಿಕೊಳ್ಳುವ ಷರತ್ತಿಗೊಳಪಟ್ಟು ನೇರನೇಮಕಾತಿ ಮೂಲಕ ಭರ್ತಿ ಮಾಡಲು ಅನುಮತಿ ನೀಡಲಾಗಿದೆ.<br>2. ಆದರೆ 15000 ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿಯಲ್ಲಿ ಒಟ್ಟು 13352 ಹುದ್ದೆಗಳ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ. ಸದರಿ 15000 ಹುದ್ದೆಗಳಲ್ಲಿ ಪ್ರೌಢಶಾಲಾ ಶಿಕ್ಷಕರ ನೇಮಕಾತಿಗೆ ಒಟ್ಟು 1648 ಹುದ್ದೆಗಳು ಮಾತ್ರ ಉಳಿದಿರುತ್ತವೆ. ಪ್ರಸ್ತುತ ಸಾಲಿನಲ್ಲಿ ಒಟ್ಟು 2500 ಹುದ್ದೆಗಳನ್ನು ಭರ್ತಿ ಮಾಡುವ ಕುರಿತು ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಲಾಗುತ್ತಿದೆ. |

**ಇಪಿ 60 ಎಸ್‌ಇಎಸ್ 2024**

**(ಎಸ್ ಮಧುಬಂಗಾರಪ್ಪ)**
**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ**
**ಇಲಾಖಾ ಸಚಿವರು**

ರಾಜ್ಯದಲ್ಲಿ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ತಾತ್ಕಾಲಿಕವಾಗಿ
ನೇಮಕವಾಗಿರುವ ಅತಿಥಿ ಶಿಕ್ಷಕರ ಜಿಲ್ಲಾವಾರು ವಿವರ

| SL NO | DISTRICT NAME | Primary Guest Teacher | Secondary Guest Teacher |
|---|---|---|---|
| 1 | BAGALKOT | 1280 | 250 |
| 2 | BALLARI | 1321 | 371 |
| 3 | BELAGAVI | 1358 | 261 |
| 4 | BELAGAVI CHIKKODI | 2561 | 472 |
| 5 | BENGALURU RURAL | 397 | 111 |
| 6 | BENGALURU U NORTH | 331 | 36 |
| 7 | BENGALURU U SOUTH | 671 | 81 |
| 8 | BIDAR | 761 | 265 |
| 9 | CHAMARAJANAGARA | 553 | 159 |
| 10 | CHIKKABALLAPURA | 581 | 202 |
| 11 | CHIKKAMANGALURU | 390 | 147 |
| 12 | CHITRADURGA | 651 | 100 |
| 13 | DAKSHINA KANNADA | 1055 | 254 |
| 14 | DAVANAGERE | 355 | 71 |
| 15 | DHARWAD | 715 | 114 |
| 16 | GADAG | 581 | 185 |
| 17 | HASSAN | 565 | 320 |
| 18 | HAVERI | 817 | 202 |
| 19 | KALBURGI | 2029 | 338 |
| 20 | KODAGU | 267 | 86 |
| 21 | KOLAR | 529 | 248 |
| 22 | KOPPAL | 1757 | 397 |
| 23 | MANDYA | 887 | 347 |
| 24 | MYSURU | 1160 | 244 |
| 25 | RAICHUR | 3347 | 679 |
| 26 | RAMANAGARA | 601 | 164 |
| 27 | SHIVAMOGGA | 1024 | 144 |
| 28 | TUMAKURU | 529 | 175 |
| 29 | TUMAKURU MADHUGIRI | 613 | 167 |
| 30 | UDUPI | 467 | 136 |
| 31 | UTTARA KANNADA | 285 | 21 |
| 32 | UTTARA KANNADA SIRSI | 734 | 118 |
| 33 | VIJAYANAGARA | 1276 | 198 |
| 34 | VIJAYAPURA | 1365 | 192 |
| 35 | YADAGIRI | 2361 | 553 |
| **TOTAL** | | **34174** | **7808** |